# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ:ತುವಿ:ಸಾ&ಅ:ಸ್ಕೌಟ್ಸ್&ಗೈಡ್ಸ್:2023-24/456 ದಿನಾಂಕ:23.05.2023

## : ಸುತ್ತೋಲೆ :

ವಿಷಯ: ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಘಟಕ ಹಾಗೂ ಸಂಯೋಜಿತ ಪದವಿ ಕಾಲೇಜುಗಳಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಘಟಕವನ್ನು ಆರಂಭಿಸುವ ಕುರಿತು.

ಉಲ್ಲೇಖ: 1. ರಾಜ್ಯ ಮುಖ್ಯ ಆಯುಕ್ತು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಮನವಿ ಪತ್ರ ದಿನಾಂಕ:04.05.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:22.05.2023

* * * * *

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಪ್ರಪಂಚದಾದ್ಯಂತ ವ್ಯಾಪಿಸಿರುವ ಏಕರೀತಿಯ ಸಮವಸ್ತ್ರವನ್ನು ಹೊಂದಿರುವ ಏಕೈಕ ಚಳುವಳಿ. ಈ ಸಂಸ್ಥೆಯು ಯುವಜನರಲ್ಲಿ ದೇಶಾಭಿಮಾನ, ಸೇವೆ, ಕ್ರಿಯಾಶೀಲತೆ, ಕ್ರೀಡಾಮನೋಭಾವ, ಸಚ್ಚಾರಿತ್ರ್ಯ, ಜೀವನ ಕೌಶಲ್ಯ ಮತ್ತು ನಾಯಕತ್ವ ಗುಣವನ್ನು ಕಲಿಸುವ ಸರ್ವಧರ್ಮಗಳ ತಿರುಳನ್ನು ಸಾರುವ ಹಾಗೂ ಶಿಸ್ತಿನ ನಾಗರೀಕರನ್ನು ಬೆಳೆಸುವ ಒಂದು ಅಂತರರಾಷ್ಟ್ರೀಯ ಯುವಚಳುವಳಿಯಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಉಲ್ಲೇಖ(1) ರ ಪತ್ರದಲ್ಲಿನ ಸೂಚನೆಯ ಮೇರೆಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಘಟಕ ಕಾಲೇಜುಗಳು, ಸರ್ಕಾರಿ ಕಾಲೇಜುಗಳು, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಘಟಕವನ್ನು ಆರಂಭಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಲಾಗಿದೆ.

ಆದೇಶದ ಮೇರೆಗೆ

23/05/2023

ಉಪಕುಲಸಚಿವರು
ಉಪಕುಲಸಚಿವರು
(ಸಾಮಾನ್ಯ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಅಡಕ: ರಾಜ್ಯ ಮುಖ್ಯ ಆಯುಕ್ತರ ಪತ್ರ

ಗೆ

1. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.
3. ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಂಯೋಜಕರು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ವಿಶೇಷ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು: (ವಿವಿ ಜಾಲತಾಣದಲ್ಲಿ ಭಿತ್ತರಿಸುವಂತೆ ಹಾಗೂ ಘಟಕ & ಸಂಯೋಜಿತ ಕಾಲೇಜುಗಳಿಗೆ ಸಂದೇಶವನ್ನು ಕಳುಹಿಸುವಂತೆ ಸೂಚಿಸಿದೆ)
4. ಕಚೇರಿ ಪ್ರತಿ.

ಸಿಆರ್

P.G.R. SINDHIA, B.E. (Civil)
STATE CHIEF COMMISSIONER
Former Minister for Health, Finance,
Home, Industries & Transport
Government of Karnataka

State Headquarters
No. 39, "Shanthigruha"
Palace Road
Bengaluru-560 001

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
# THE BHARAT SCOUTS & GUIDES, KARNATAKA

Ref : BSG/SHQ/206/2023-24 Date : 4-05-2023

ಮಾನ್ಯರೆ,

ವಿಷಯ:-ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ರೋವರ್-ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ತೆರೆಯಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿ.

ತಮಗೆ ತಿಳಿದಿರುವಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಪ್ರಪಂಚದಾದ್ಯಂತ ವ್ಯಾಪಿಸಿರುವ ಏಕರೀತಿಯ ಸಮವಸ್ತ್ರವನ್ನು ಹೊಂದಿರುವ ಏಕೈಕ ಚಳವಳಿ. ಈ ಸಂಸ್ಥೆಯು ಯುವಜನರಲ್ಲಿ ದೇಶಾಭಿಮಾನ, ಸೇವೆ, ಕ್ರಿಯಾಶೀಲತೆ, ಕ್ರೀಡಾಮನೋಭಾವ, ಸಚ್ಚಾರಿತ್ರ್ಯ, ಜೀವನ ಕೌಶಲ್ಯ ಮತ್ತು ನಾಯಕತ್ವ ಗುಣವನ್ನು ಕಲಿಸುವ, ಸರ್ವಧರ್ಮಗಳ ತಿರುಳನ್ನು ಸಾರುವ ಹಾಗೂ ಶಿಸ್ತಿನ ನಾಗರೀಕರನ್ನು ಬೆಳೆಸುವ ಒಂದು ಅಂತರರಾಷ್ಟ್ರೀಯ ಯುವಚಳವಳಿಯಾಗಿದೆ.

ಪ್ರಸ್ತುತ ಕರ್ನಾಟಕ ರಾಜ್ಯದಾದ್ಯಂತ ಶೇ.50% ಸರ್ಕಾರಿ ಕಾಲೇಜುಗಳಲ್ಲಿನ ಪ್ರಾಧ್ಯಾಪಕರುಗಳು ತರಬೇತಿಯನ್ನು ಹೊಂದಿ, ರೋವರ್-ರೇಂಜರ್ ಘಟಕಗಳನ್ನು ತೆರೆದಿರುತ್ತಾರೆ. ಆದರೆ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳಲ್ಲಿ ರೋವರ್-ರೇಂಜರ್ ಘಟಕಗಳು ಅತ್ಯಂತ ಕಡಿಮೆ ಇರುತ್ತವೆ.

ಆದ್ದರಿಂದ ಸರ್ಕಾರಿ ಕಾಲೇಜುಗಳೊಂದಿಗೆ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿ, ಸದರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರುಗಳನ್ನು ರೋವರಿಂಗ್-ರೇಂಜರಿಂಗ್ ತರಬೇತಿಗಳಿಗೆ ನಿಯೋಜಿಸುವ ಮೂಲಕ ಕಾಲೇಜುಗಳಲ್ಲಿ ರೋವರ್-ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ತೆರೆಯಲು ಸಂಬಂಧಪಟ್ಟವರುಗಳಿಗೆ ಸೂಕ್ತ ನಿರ್ದೇಶನ ನೀಡಿ, ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ರೋವರಿಂಗ್-ರೇಂಜರಿಂಗ್ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಹಕಾರ ನೀಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಮಾನ್ಯ ರಿಜಿಸ್ಟ್ರಾರ್‌ರವರು
ತುಮಕೂರು ವಿಶ್ವವಿದ್ಯಾಲಯ
ವಿಶ್ವವಿದ್ಯಾಲಯ ಕಾರ್ಯಾಲಯ
ಬೆಂಗಳೂರು ಹೊನ್ನಾವರ ರಸ್ತೆ
ವೆಂಕಟೇಶ್ ರಾಂ ಕಾಲೋನಿ, ತುಮಕೂರು-572103

Ph: (Off): 080-22343400, 22260017
22267470, 22261047
Res.: 080-26582711, 26586725
info@bsgkarnataka.org
www.bsgkarnataka.org
Mob : 09845371958
pgrsindhia@gmail.com